# ಎಷ್ಟೊಂದು ವಿಶ್ವವಿದ್ಯಾಲಯಗಳು...

ಜಿಲ್ಲೆಗೊಂದು ವಿಶ್ವವಿದ್ಯಾಲಯ ಎಂಬ ಉದಾರ ನೀತಿ ಪ್ರಕಟಿಸುವ ಮೂಲಕ ರಾಜ್ಯ ಸರ್ಕಾರ ಉನ್ನತ ಶಿಕ್ಷಣ ಕ್ಷೇತ್ರವನ್ನು ರಂಗಮಂದಿರ ಇಲ್ಲವೇ ಸಮುದಾಯ ಭವನ ನಿರ್ಮಾಣಕ್ಕೆ ಸಮೀಕರಿಸಿದಂತೆ ತೋರುತ್ತದೆ. ಅಗತ್ಯ ಮೂಲಸೌಕರ್ಯಗಳನ್ನು ಒದಗಿಸದೆ, ಸಿಬ್ಬಂದಿಯನ್ನು ನೇಮಿಸದಿದ್ದರೆ ವಿಶ್ವವಿದ್ಯಾಲಯ ಆರಂಭಿಸುವುದರಿಂದ ಯಾವ ಪ್ರಯೋಜನ? ಪ್ರದೇಶವಾರು ಮತ್ತು ವಿಷಯವಾರು ಅಂಶಗಳನ್ನು ಪರಿಗಣಿಸಿ ಆರಂಭಿಸಿರುವ ವಿಶ್ವವಿದ್ಯಾಲಯಗಳನ್ನು ಲೆಕ್ಕಹಾಕಿದರೆ ಅವುಗಳ ಸಂಖ್ಯೆ 21ಮುಟ್ಟಿದೆ. ಇನ್ನೂ ಜಿಲ್ಲೆಗೊಂದರ ಲೆಕ್ಕದಲ್ಲಿ ಇನ್ನೂ ಒಂಬತ್ತು ವಿಶ್ವವಿದ್ಯಾಲಯಗಳ ಆರಂಭ ಬಾಕಿ ಇದೆ. ಉನ್ನತ ಶಿಕ್ಷಣದ ಬಗ್ಗೆಯಷ್ಟೇ ಅಲ್ಲ, ಪ್ರಾಥಮಿಕ ಶಿಕ್ಷಣದ ಕುರಿತಾಗಿ ಕೂಡ ಯಾವ ಒಳನೋಟವಾಗಲೀ, ಮುಂದಿನ ಪೀಳಿಗೆ ಕುರಿತಾಗಿ ಕನಸಾಗಲೀ ಇಲ್ಲದ ನಾಯಕತ್ವ ಇದ್ದರೆ ಇಂಥ ನಿರ್ಧಾರಗಳು ಹೊರಬರುತ್ತವೆ!

ಹಳೆಯ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ್ದಿರಲಿ, ಹೊಸದಾಗಿ ಆರಂಭವಾದ ವಿವಿಗಳಿಗೆ ಸಂಬಂಧಿಸಿದ್ದಿರಲಿ, ಕುಲಪತಿ ನೇಮಕ, ಸಿಬ್ಬಂದಿ ನೇಮಕಗಳಲ್ಲಿ ಹಣ ಮಾಡುವುದೇ ಈಗಿನ ವಿದ್ಯಮಾನ. ಹಾಸನ, ಮೈಸೂರು ವೈದ್ಯಕೀಯ ಕಾಲೇಜುಗಳಿಗೆ ಮಾಡಿದ ನೇಮಕದಲ್ಲಿ ಕಾನೂನು ಉಲ್ಲಂಘನೆ, ಭ್ರಷ್ಟಾಚಾರ ಮತ್ತಿತರ ಅಕ್ರಮಗಳಿಗೆ ವೈದ್ಯಕೀಯ ಶಿಕ್ಷಣ ಸಚಿವರು ತಲೆದಂಡ ಕೊಡಬೇಕಾಯಿತು. ಪ್ರಕರಣ ಹೈಕೋರ್ಟಿನಲ್ಲಿದೆ. ನೇಮಕಗೊಂಡವರು ಕೆಲಸ ಕಳೆದುಕೊಂಡು ಅತಂತ್ರರಾಗಿದ್ದಾರೆ. ಕೆಲಸ ಕೊಡಿಸುವಲ್ಲಿ ಹಣ ಮಾಡಿದವರು ನಿರುಮ್ಮಳವಾಗಿದ್ದಾರೆ. ಅಧಿಕಾರದ ಪ್ರತಿ ಹಂತದಲ್ಲಿಯೇ ಹಣ ಮಾಡುವುದೇ ಪರಮ ಗುರಿ ಎಂಬಂತಿರುವ ರಾಜಕೀಯ ವ್ಯವಸ್ಥೆಯಲ್ಲಿ ಮಾತ್ರ ಇಂಥ ವ್ಯವಹಾರ ನಡೆಯಬಲ್ಲದು. ಹೊಸ ವಿಶ್ವವಿದ್ಯಾಲಯಗಳಲ್ಲಿಯೂ ನೇಮಕಗಳಲ್ಲಿ ಅಕ್ರಮ ನಡೆದ ವರದಿಗಳು ಬರುತ್ತಿದ್ದರೂ ಅವೆಲ್ಲ ತನಿಖೆಗೆ ಒಳಪಟ್ಟಿಲ್ಲ. ಶೀಘ್ರ ಹಣ ಮಾಡುವ ಬಯಕೆ ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣ ಕ್ಷೇತ್ರವನ್ನೂ ಬಿಟ್ಟಿಲ್ಲ. ಆದ್ದರಿಂದ ಪ್ರಶ್ನೆಪತ್ರಿಕೆಗಳ ಮಾರಾಟದಂತಹ ಅಕ್ರಮಗಳು ವರದಿಯಾಗುತ್ತಲೇ ಇರುತ್ತವೆ. ಪರೀಕ್ಷೆಗಳ ಪಾವಿತ್ರ್ಯ ಇದರಿಂದ ನಷ್ಟವಾಗುತ್ತದೆ ಎಂಬ ಅಳುಕು ಕೂಡ ಶಿಕ್ಷಣ ರಂಗದಲ್ಲಿ ವ್ಯಕ್ತವಾಗುತ್ತಿಲ್ಲ. ಸರ್ಕಾರವೂ ಈ ಬಗ್ಗೆ ದಿವ್ಯ ಮೌನಕ್ಕೆ ಶರಣಾಗುತ್ತಿದೆ.

ಜನತೆಯ ಎದುರು ಅಭಿವೃದ್ಧಿಯ ಮರೀಚಿಕೆಯನ್ನು ತೋರಿಸುತ್ತಿರುವ ಸರ್ಕಾರ ವಿಶ್ವವಿದ್ಯಾಲಯಗಳಿಗೆ ನೀಡುತ್ತಿರುವ ಹಣ ಬೋಧಕ ಸಿಬ್ಬಂದಿಯ ಪರಿಷ್ಕೃತ ವೇತನದ ಕಾರಣ ಇತರ ಕೆಲಸಗಳಿಗೆ ಸಾಕಾಗುತ್ತಿಲ್ಲ ಎಂಬ ಆತಂಕಕಾರಿ ಪರಿಸ್ಥಿತಿ ಈಚಿನದು. ಹೊಸ ವೇತನ ಶ್ರೇಣಿಯಿಂದ ಬೋಧಕ ಸಿಬ್ಬಂದಿ ಸಂತೃಪ್ತರಾಗಿದ್ದಾರೆಂಬುದು ನಿಜ. ಆದರೆ ಅವರ ವಿದ್ವತ್ತಿನ ಪ್ರಯೋಜನ ವಿದ್ಯಾರ್ಥಿಗಳಿಗೆ ತಲುಪಿಸುವ ವ್ಯವಸ್ಥೆ ಆಗುತ್ತಿಲ್ಲ. ವಿಶ್ವವಿದ್ಯಾಲಯಗಳಿಗೆ ಆರ್ಥಿಕ ಕೊರತೆಯ ಕಡಿವಾಣ. ಜಾಗತೀಕರಣದ ಕಾರಣ ತೀವ್ರ ಪೈಪೋಟಿಗೆ ಸಜ್ಜಾಗಬೇಕಿರುವ ರಾಜ್ಯದ ವಿಶ್ವವಿದ್ಯಾಲಯಗಳು ಹೊಸ ಹೊಸ ಕೋರ್ಸುಗಳನ್ನು ಆರಂಭಿಸುವುದಕ್ಕೆ ಇಲ್ಲವೇ ಹೊಸ ನೇಮಕಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ವಿಶ್ವವಿದ್ಯಾಲಯಗಳಲ್ಲಿ ಶೇ 30ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇದ್ದು, ಇರುವ ಸಿಬ್ಬಂದಿಯಿಂದಲೇ ಹೆಚ್ಚು ಕೆಲಸ ತೆಗೆಯಬೇಕಾಗಿದೆ. ಒತ್ತಡದಿಂದ ಗುಣಮಟ್ಟದ ಕೆಲಸ ಪಡೆಯುವುದು ಕಷ್ಟ. ಇದರ ಅರಿವು ಬರುವಂಥ ಸಂವೇದನೆಯ ಕೊರತೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿರುವುದು ವಿಷಾದಕರ.

ಸರ್ಕಾರ ಉನ್ನತ ಶಿಕ್ಷಣ ಕುರಿತಾಗಿ ತಾಳಿರುವ ಇಂಥ ನಕಾರಾತ್ಮಕ ಧೋರಣೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪರೋಕ್ಷವಾಗಿ ನೆರವಾಗುತ್ತಿದೆ. ಹಾಗೆ ನೋಡಿದರೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಹಿತಾಸಕ್ತಿ ಹೊಂದಿದ ರಾಜಕಾರಣಿಗಳ ಸಂಖ್ಯೆ ಕಡಿಮೆಯದಲ್ಲ. ಸ್ವಂತಕ್ಕೊಂದು ಶಿಕ್ಷಣ ಸಂಸ್ಥೆ ಹೊಂದುವುದು ಅಧಿಕಾರಕ್ಕೆ ಬಂದ ರಾಜಕಾರಣಿಗಳ ಬಯಕೆ. ಅಂತರರಾಷ್ಟ್ರೀಯ ಗುಣಮಟ್ಟದ ಹೆಸರಿನಲ್ಲಿ ಪ್ರಾಥಮಿಕ ಹಂತದ ಶಿಕ್ಷಣದಲ್ಲಿಯೂ ಅಪಾರವಾಗಿ ಶುಲ್ಕ ವಸೂಲು ಮಾಡುವ ಖಾಸಗಿ ಸಂಸ್ಥೆಗಳು ಶಿಕ್ಷಣವನ್ನು ಲಾಭದಾಯಕ ಉದ್ಯಮವನ್ನಾಗಿಸಿವೆ. ಶಿಕ್ಷಣೋದ್ಯಮ ರಾಜ್ಯದಲ್ಲಿ ಪ್ರಬಲ ಲಾಬಿಯಾಗುವಷ್ಟು ಬೆಳೆಯುತ್ತಿರುವುದಕ್ಕೆ ಸರ್ಕಾರದಲ್ಲಿರುವವರ ಸ್ವಾರ್ಥ ದೃಷ್ಟಿಯೂ ಪ್ರಮುಖ ಕಾರಣ. ಏನೇ ಕೆಲಸವಿರಲಿ, ಅದರಿಂದ ತಮಗೆ ಹಣ ಸಿಗಬೇಕು ಎಂಬ ಸ್ವಾರ್ಥ ಹಾಗೂ ಕುತ್ಸಿತ ಲೆಕ್ಕಾಚಾರ ಜನಪ್ರತಿನಿಧಿಗಳಲ್ಲಿ ಇರುವವರೆಗೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ಆಗದು.

■ ಲಕ್ಷ್ಮಣ ಕೊಡಸೆ

**ಹೊಸ ವಿಶ್ವವಿದ್ಯಾಲಯಗಳಲ್ಲಿಯೂ ನೇಮಕಗಳಲ್ಲಿ ಅಕ್ರಮ ನಡೆದ ವರದಿಗಳು ಬರುತ್ತಿದ್ದರೂ ಅವೆಲ್ಲ ತನಿಖೆಗೆ ಒಳಪಟ್ಟಿಲ್ಲ. ಶೀಘ್ರ ಹಣ ಮಾಡುವ ಬಯಕೆ ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣ ಕ್ಷೇತ್ರವನ್ನೂ ಬಿಟ್ಟಿಲ್ಲ.**

